INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -2, July-Auguest, 2021, Page No,01-08
Peer Reviewed Journal, Referred Journal

# ಹರತಿ ಕೋಟೆಯ ಪಾಳೇಯಗಾರರ ಕಾಲದಲ್ಲಿ ನೀರಾವರಿ ವ್ಯವಸ್ಥೆ

**ಡಾ.ಎಸ್.ಜಿ.ರಾಮದಾಸರೆಡ್ಡಿ.**[1]

ಕರ್ನಾಟಕವು ಶಿಲಾಯುಗದ ತವರೂರಾದರೆ, ಚಿತ್ರದುರ್ಗ ಜಿಲ್ಲೆ 'ಪ್ರಾಗಿತಿಹಾಸದ ಗಣಿ' ಎಂದೇ ಹೆಸರಾಗಿದೆ. ವಿಶಿಷ್ಟವಾದ ಪ್ರಾಗಿತಿಹಾಸ ಮತ್ತು ಚರಿತ್ರೆಯನ್ನು ಹೊಂದಿರುವ ಈ ಜಿಲ್ಲೆ ಕಾಲದಿಂದ ಕಾಲಕ್ಕೆ ಮಹತ್ವವಾದ ಪ್ರದೇಶವಾಗಿ ಮಾನವನ ವಾಸಸ್ಥಳಕ್ಕೆ ಯೋಗ್ಯಪ್ರದೇಶವಾಗಿ ಹೊರಹೊಮ್ಮಿದೆ. ಪ್ರಾಚೀನ ಸಂಸ್ಕೃತಿಗಳು ನದಿ ಕಣಿವೆಗಳಲ್ಲಿ ಉಗಮಗೊಂಡು ಮಣ್ಣಿನ ಫಲವತ್ತತೆ, ನೀರಾವರಿ ಸೌಲಭ್ಯ ಹಾಗೂ ಅನುಕೂಲಕರ ಹವಾಗುಣಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ. ಪ್ರಪಂಚದ ವಿವಿದೆಡೆ ಉಗಮಿಸಿದ ನಾಗರೀಕತೆಗಳ ಬಗ್ಗೆ ಅಧ್ಯಯನ ನಡೆಸಿರುವ ಸಂಶೋಧಕರು ನಾಗರೀಕತೆಗಳ ಉಗಮ ಮತ್ತು ವಿಕಾಸ'ಕ್ಕೆ ಕೃಷಿ ಹಾಗೂ ಆಹಾರ ಉತ್ಪಾದನೆಯಲ್ಲಿ ಮಿಗತೆ ಉತ್ಪಾದನೆಗೆ ಇರಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ.[1]

ಈ ನಿಟ್ಟಿನಲ್ಲಿ ಕರ್ನಾಟಕದ ನದಿಗಳಲ್ಲಿ ಒಂದಾದ ವೇದಾವತಿ ನದಿಯು ಹರತಿ ಪಾಳೇಯಗಾರರ ಭೂಭಾಗದಲ್ಲಿದ್ದು ಮಲೆನಾಡು ಮತ್ತು ಮೈದಾನ ಪ್ರದೇಶದಡಿಯಲ್ಲಿ ಹರಿಯುತ್ತಿದೆ. ಈ ಭೂಭಾಗವು ಅತ್ಯಂತ ಪುರಾತನ ಶಿಲಾಸ್ತೋಮವಾದ ಧಾರಾವಾಡ ಶಿಲಾಸ್ತೋಮ ಮತ್ತು ಕ್ಲೋಸ್‌ಪೇಟೆ ಶಿಲಾಸ್ತೋಮದಡಿಯಲ್ಲಿದ್ದು ವಾರ್ಷಿಕ 25 ಇಂಚು, ಕೆಲವು ಕಡೆ 15 ಇಂಚಿಗಿಂತಲೂ ಕಡಿಮೆ ಮಳೆ ಬೀಳುವ ಭೂಪ್ರದೇಶವಾಗಿದೆ. ಈ ಪ್ರದೇಶವು ದಕ್ಷಿಣಭಾರತದ ಪರ್ಯಾಯ ದ್ವೀಪದ ಮಳೆಯ ನೆರಳಿನ ಪ್ರದೇಶವಾಗಿದ್ದು ಥಾರ್ ಮರುಭೂಮಿಯನ್ನು ಬಿಟ್ಟರೆ ಈ ಭಾಗವೇ ಅತಿ ಶುಷ್ಕವಾಗಿರುತ್ತದೆ.[2] ಈ ಭೂಭಾಗವು ಕೃಷಿ ಯೋಗ್ಯ ಭೂಮಿಯ ಬಹುಪಾಲನ್ನು ಒಳಗೊಂಡಿರುವ ಬಯಲು ಪ್ರದೇಶ ಅಡಿಗಡಿಗೆ ಬರಕ್ಕೆ ಈಡಾಗುತ್ತದೆ. ಈ ಭಾಗದಲ್ಲಿ ಅತ್ಯಂತ ಪ್ರಾಚೀನ ದಾಖಲೆ ಪಡೆದಿರುವ ಮಳೆಯ ವೈಫಲ್ಯ ದುರ್ಗಾದೇವಿ ಮಹಾಕ್ಷಾಮ 1296ರಲ್ಲಿ ಆರಂಭವಾಗಿ 12 ವರ್ಷವಿತ್ತೆಂದು ಹೇಳಲಾಗಿದೆ. ಹಾಗೂಕ್ರಿ.ಶ.1419, 1420, 1472, 1473ರಲ್ಲಿ ಮಳೆಯಿಲ್ಲದೆ, ಬಿತ್ತನೆಯಾಗದೆ ಜನ ಸಂಕಷ್ಟಕ್ಕೆ ಒಳಗಾದ ಪ್ರದೇಶವಾಗಿದೆ.[3,4]ಸ್ಟೇಟ್, ಓ.ಹೆಚ್.ಕೆ ಅವರು ಭಾರತದ ಸಾಂಸ್ಕೃತಿಕ ಭೂಗೋಳದ ಅಧ್ಯಯನದಲ್ಲಿ

[1]. ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

ಭಾರತದ ಭೌಗೋಳಿಕ ವ್ಯವಸ್ಥೆಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದರೆ, ಮಣ್ಣು, ಹವಾಮಾನ, ನದಿ, ಮಳೆ, ಮುಂತಾದ ವಿಷಯಗಳ ಬಗ್ಗೆ ಸುಬ್ಬರಾವ್.ಬಿ. ಅವರು ವಿಶ್ಲೇಷಣೆ ಮಾಡಿದ್ದಾರೆ.[5] ಈ ಪ್ರದೇಶವು ಉಷ್ಣವಲಯದಲ್ಲಿರುವುದರಿಂದ ಅನೇಕ ಬಗೆಯ ಹಣ್ಣುಹಂಪಲಿನ ಸಸ್ಯಗಳು ಇಲ್ಲಿ ವಾಸಿಸುತ್ತಿದ್ದ ಜನರಿಗೆ ದೊರಕುತ್ತಿದ್ದವು.[6] ಪದ್ದಯ್ಯ.ಕೆ. ಅವರು ನದಿಗಳ ಕಣಿವೆಗಳ ಹಾಗೂ ಮೈದಾನ ಪ್ರದೇಶವನ್ನು ಬಳಸಿಕೊಂಡು ಪೂರ್ವಇತಿಹಾಸದ ಮಾನವರು ಜೀವನ ನಡೆಸಿದ್ದಾರೆ ಎಂದಿದ್ದಾರೆ.[7] ಇದೇ ತರಹ ವೇದಾವತಿ ನದಿಯ ತೀರದ ಶಿಲಾಯುಗದ ಮಾನವನು ಹರತಿ ಪಾಳೇಯಗಾರರ ಸಾಮ್ರಾಜ್ಯದ ಭೂಭಾಗದಲ್ಲಿ ಜೀವನ ಸಾಗಿಸಿಕೊಂಡು ಬಂದಿದ್ದಾನೆಂದು ಹೇಳಬಹುದು.[8]

ಈಚೆಗೆ ಆಫ್ರಿಕೆಯಲ್ಲಿ ನಡೆದ ಪ್ರಾಚೀನ ಮಾನವನ ಶಾಸ್ತ್ರಿಯ ಸಂಶೋಧನೆಗಳ ಪ್ರಕಾರ ಮಾನವನ ಪ್ರಾಚೀನತೆ ಇಂದಿಗೆ 3.5 ಮಿಲಿಯನ್‌ದಿಂದ 4 ಮಿಲಿಯನ್ ವರ್ಷಗಳಷ್ಟು ಪೂರ್ವಕ್ಕೆ ಹೋಗುತ್ತದೆ ಎಂದು ಅಭಿಪ್ರಾಯಪಡಲಾಗಿದೆ.[9] ಹೊಲೋಸೀನ್ ಆರಂಭದಲ್ಲಿ ಉಷ್ಣತಾಮಾನ ಆರ್ದ್ರತೆ ಹೆಚ್ಚಿ ಸಸ್ಯ ಸಂಪತ್ತು ವೃದ್ಧಿಯಾಗಿ ಸಸ್ಯವನ್ನು ಅವಲಂಭಿಸಿದ ಪ್ರಾಣಿಗಳ ಸಂಖ್ಯೆಯ ಪದ್ಧತಿ ಆರಂಭವಾಯಿತು,[10] ಹರತಿ ಪಾಳೇಗಾರರ ಸಾಮ್ರಾಜ್ಯದ ಭೂಭಾಗದಲ್ಲಿ ದೊರಕಿರುವ ಶಿಲಾಯುಗದ ಮಾನವನ ಅವಶೇಷಗಳು ಮತ್ತು ಸ್ಮಾರಕಗಳ ಆಧಾರದ ಮೇಲೆ ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಬೃಹತ್‌ಶಿಲಾಯುಗ ಸಂಸ್ಕೃತಿಗಳು ಮತ್ತು ಇತಿಹಾಸ ಆರಂಭ ಕಾಲದ ಹಾಗೂ ನಂತರದ ಸಾಮ್ರಾಜ್ಯಗಳ ಅವಧಿಯಲ್ಲಿ ಎಚ್ಚರಿಕೆಯಿಂದ ನೆಲೆಗಳನ್ನು ಹಾಗೂ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಭೌಗೋಳಿಕವಾಗಿ ಆದ ಬದಲಾವಣೆಗಳಿಗೆ ಹೊಂದಿಕೊಂಡು ಜೀವನ ಸಾಗಿಸಿದ್ದಾನೆ.[11]

ಹರತಿ ಕೋಟೆ ನೆಲೆಯಲ್ಲಿ ವೇದಾವತಿ ನದಿಗೆ ಹರಿದು ಹೋಗುವ ಎರಡು ಹಳ್ಳಗಳ ದಂಡೆಯ ಮೇಲೆ ದೊರಕಿರುವ ಸೂಕ್ಷ್ಮಶಿಲಾಯುಗ, ನವಶಿಲಾಯುಗ ಸಂಸ್ಕೃತಿ, ಬೃಹತ್‌ಶಿಲಾಯುಗ ಸಂಸ್ಕೃತಿ ಮತ್ತು ಇತಿಹಾಸ ಆರಂಭಕಾಲದ ಅವಶೇಷಗಳು ಹಾಗೂ ಈ ನೆಲೆಯ ಸುತ್ತಮುತ್ತ ಸೂಕ್ಷ್ಮವಾಗಿ ಗಮನಿಸಿದರೆ ನದಿ ತೀರದಲ್ಲಿ 3 ರಿಂದ 5 ಕಿ.ಮೀ ಅಂತರದಲ್ಲೇ ನೆಲೆಗಳನ್ನು ವಾಸಸ್ಥಳಗಳನ್ನಾಗಿ ಮಾಡಿಕೊಂಡು ಗ್ರಾಮಜೀವನ ನಡೆಸಿದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ದೊರಕಿವೆ.[12]

ಪ್ರಕೃತಿದತ್ತವಾದ ಭೂಮಿಯಲ್ಲಿ ವಾಸಿಸಲು ಎತ್ತರವಾದ ಸಮತಟ್ಟು ಪ್ರದೇಶ, ಕೃಷಿಗೆ ಯೋಗ್ಯಭೂಮಿ, ನೀರಿನ ಆಸರೆಯಿರುವ, ಸಮಾಧಿಗಳನ್ನು ಮಾಡಲು ಯೋಗ್ಯಪ್ರದೇಶ, ನದಿಯ ಸಾಲನ್ನು ಆಯ್ಕೆ ಮಾಡಿಕೊಂಡಿರುವುದನ್ನು ನೋಡಿದರೆ ಅಂದೇ ಈ ನೆಲೆಯ ಮಾನವನು ವೈಜ್ಞಾನಿಕ ಚಿಂತನೆ ನಡೆಸಿ ಪ್ರಕೃತಿಯನ್ನು ಸೂಕ್ಷ್ಮವಾಗಿ ಬಳಸಿಕೊಂಡು ಜೀವನ ಸಾಗಿಸಿರುವುದು ಕಂಡುಬರುತ್ತದೆ.

ಹರತಿ ಕೋಟೆಯ ನೆಲೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ಮಾನವನು ನೆಲೆನಿಂತು ಅವನಿಗೆ ಅಗತ್ಯವಾಗಿ ಬೇಕಾಗಿದ್ದ ನೀರು, ಆಹಾರಕ್ಕಾಗಿ, ಹಣ್ಣು, ಹಂಪಲು, ಪಶುಪಾಲನೆಗಾಗಿ ಹುಲ್ಲುಗಾವಲು, ದೈನಂದಿನ ಜೀವನೋಪಾಯಕ್ಕೆ ಆಹಾರ ಧಾನ್ಯಗಳ ಉತ್ಪಾದನೆಯ ಅಗತ್ಯತೆ ಉಂಟಾಗಿ ಆರಂಭಿಕ ಬೇಸಾಯ ಪದ್ಧತಿಯನ್ನು ಆರಂಭಿಸಿದ್ದು ಈ ಎಲ್ಲ ಸೌಕರ್ಯಗಳು ಅಂದು ಈ ನೆಲೆಯಲ್ಲಿದ್ದು ಜೀವನ ಸಾಗಿಸಿರಬೇಕು.

ಬೃಹತ್ ಶಿಲಾಯುಗದ ಮಾನವನು ನೆಲೆಯಲ್ಲಿ ವಾಸಿಸಿದ್ದು ಗ್ರಾಮ ಜೀವನ ಸಾಗಿಸಿದ್ದ ಬಗ್ಗೆ ಗೃಹಬಳಕೆಯಲ್ಲಿ ಬಳಸಿದ ಮಡಿಕೆ ತುಣುಕುಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ, ಸುಟ್ಟಮಣ್ಣಿನ ಕೊಳವೆಗಳು, ಕಬ್ಬಿಣದ ತುಂಡುಗಳು, ಕಬ್ಬಿಣದ ಆಯುಧಗಳು, ಇತರೆ ಅವಶೇಷಗಳು ಸಾಕ್ಷಿಯಾಗಿವೆ. ಜೊತೆಗೆ ಇವರ ಕಾಲದ ಸಮಾಧಿಗಳು, ಸಮಾಧಿಗಳಲ್ಲಿ ಬಳಸುವ ಮಡಿಕೆ ಭಾಗಗಳು ಮೂಳೆ ಭಾಗಗಳು, ಇತರೆ ಅವಶೇಷಗಳು ದೊರಕಿವೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಈ ನೆಲೆಯ ಮಾನವನು **"ವ್ಯವಸ್ಥಿತವಾದ ಜೀವನ"** ನಡೆಸುತ್ತಿದ್ದನೆಂದು ಹೇಳಬಹುದು. ಇವನಿಗೆ ಅಗತ್ಯವಾಗಿ ಬೇಕಾಗಿದ್ದ ನೀರಿಗಾಗಿ ಪಕ್ಕದಲ್ಲೇ ಹರಿದು ಹೋಗುವ ಎರಡು ಹಳ್ಳಗಳನ್ನು ಆಸರೆಯಾಗಿ ಪಡೆದಿರ ಬಹುದಾಗಿದೆ. ಈ ಹಳ್ಳಗಳ ಭೂಭಾಗವನ್ನು ನೋಡಿದರೆ ಹಿಂದೆ ಈ ಹಳ್ಳಗಳು ವಿಶಾಲವಾಗಿ, ಆಳವಾಗಿ ತುಂಬಿ ಹರಿದಿರುವ ಸಾಧ್ಯತೆಯಿದೆ. ಈ ಹಳ್ಳಗಳ ಮಧ್ಯೆ ಎತ್ತರವಾದ ಸಮತಟ್ಟಾದ ಭೂಭಾಗವಿದ್ದು ಇಲ್ಲಿ ನೆಲಸಿದ ಅಂದಿನ ಮಾನವನು ಈ ಹಳ್ಳಗಳ ನೀರನ್ನು ಕುಡಿಯುವ ನೀರಿಗಾಗಿ, ವ್ಯವಸಾಯಕ್ಕಾಗಿ ಅವನು ಕಟ್ಟೆಯನ್ನು ಕಟ್ಟಿಕೊಂಡಿರುವ ಸಾಧ್ಯತೆಯಿದೆ.

ಜೊತೆಗೆ ನೆಲೆಯಲ್ಲಿ ದೊರಕಿರುವ ಇತಿಹಾಸ ಆರಂಭ ಕಾಲದ ಅವಶೇಷಗಳಾದ ಇಟ್ಟಿಗೆಗಳು, ಮಣಿಗಳು, ಶೆಲ್‌ಕೊಳವೆಗಳು, ಚಿಕ್ಕಲಿಂಗಗಳು, ಕಲ್ಲಿನ ರಂಧ್ರವಿರುವ ಮಣಿ, ಹವಳ ಮಣಿಗಳು, ಅಲಂಕಾರಿಕ ಮಡಿಕೆ ಭಾಗಗಳನ್ನು ಗಮನಿಸಿದರೆ ಶಾತವಾಹನರ ಕಾಲದಲ್ಲಿ ಪ್ರಮುಖ ನೆಲೆಯಾಗಿತ್ತೆಂದು ಹೇಳಬಹುದು.[13] ಹೊಲದ ಒಡೆಯನಾದ ನರಸಿಂಹಮೂರ್ತಿ ಪ್ರಕಾರ ಸುಮಾರು 5 ಅಡಿ ಆಳದಲ್ಲಿ ದೊಡ್ಡ ಇಟ್ಟಿಗೆಗಳಿಂದ ಕೂಡಿದ ಗೋಡೆಯಿದೆ. ನೇಗಿಲು ಹೊಡೆಯುವಾಗ ಇಟ್ಟಿಗೆಗಳು ಮೇಲೆ ಬರುತ್ತವೆ ಎಂದು ಅಭಿಪ್ರಾಯಪಟ್ಟರು.[14] ಈ ಅಂಶಗಳನ್ನು ಗಮನಿಸಿದರೆ ಶಾತವಾಹನರ ಕಾಲದಲ್ಲೂ ಸಹ ವ್ಯವಸ್ಥಿತವಾದ ಜೀವನವನ್ನು ನೆಲೆಯ ಮಾನವನು ಸಾಗಿಸಿದ್ದನೆಂದು ಹಾಗೂ ಉನ್ನತ ಮಟ್ಟದ ವ್ಯವಸಾಯ ಮಾಡುತ್ತಿದ್ದನೆಂದು, ನೀರಿನ ಆಸರೆಗಾಗಿ ಹಳ್ಳಗಳಿಗೆ ಕಟ್ಟೆಗಳನ್ನು ನಿರ್ಮಿಸಿಕೊಂಡು ನೀರಾವರಿ ಮಾಡುತ್ತಿರುವ ಸಾಧ್ಯತೆಯಿರಲೇ ಬೇಕು ಎಂದು ಹೇಳಬಹುದು.

ಈಗಿರುವ ಗ್ರಾಮದ ಕೆರೆಗಳು ವ್ಯವಸ್ಥಿತವಾದ ಆರಂಭಿಕ ಬೇಸಾಯ ಪದ್ಧತಿಯನ್ನು ಆರಂಭಿಸಿದ ಬೃಹತ್ ಶಿಲಾಯುಗದ ಕಾಲದಲ್ಲಿ ಸಣ್ಣ ಪ್ರಮಾಣದಲ್ಲಿ ಕಟ್ಟೆಗಳ ನಿರ್ಮಾಣ ಆಗಿ ನಂತರ ಇತಿಹಾಸ ಆರಂಭ ಕಾಲದಲ್ಲಿ ಹಾಗೂ ನಂತರದ ದಿನಗಳಲ್ಲಿ ಈ ಕಟ್ಟೆಗಳನ್ನೆ ದೊಡ್ಡ ಪ್ರಮಾಣದ ಕೆರೆಗಳನ್ನಾಗಿ

ನಿರ್ಮಾಣ ಮಾಡಿರುವ ಸಾಧ್ಯತೆಯಿದೆ. ಈ ಕೆರೆಗಳು ಗ್ರಾಮದ ಮಾರಮ್ಮಗುಡಿಯ ಮುಂಭಾಗದಲ್ಲಿರುವ ಕೆರೆಯನ್ನು ಚಿಕ್ಕಕೆರೆಯೆಂದು, ಊರಿನ ಬಲಭಾಗದಲ್ಲಿರುವ ಕೆರೆಯನ್ನು ದೊಡ್ಡ ಕೆರೆಯೆಂದು ಕರೆಯುತ್ತಿದ್ದು[15] ಈ ಎರಡು ಕೆರೆಗಳನ್ನು ರತ್ನಗಿರಿ ಪಾಳೇಗಾರರು ನಿರ್ಮಿಸಿರಬಹುದೆಂದು ಇತ್ತೀಚಿನ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.[16]

ಈ ಕೆರೆಗಳಿಗೆ ಪೂರಕವಾಗಿ ಬೃಹತ್ ಶಿಲಾಯುಗದ ಮಾನವನು ಕಟ್ಟೆಗಳನ್ನು ನಿರ್ಮಿಸಿಕೊಂಡು ಜೀವನ ಸಾಗಿಸಿದ್ದನೆಂದು ಪುಣೆಯ ಹತ್ತಿರದ ಇನಾಂಗಾನ್ ಉತ್ಖನನ ಹಾಗೂ ಪಟ್ಟದಕಲ್ಲು ಉತ್ಖನನಗಳಿಂದ ತಿಳಿಯುತ್ತದೆ. ಈ ಕಟ್ಟೆಗಳನ್ನು ಕ್ರಿ.ಪೂ–1500ರ ಸಮಯದಲ್ಲೇ ನಿರ್ಮಾಣ ಮಾಡಿಕೊಂಡಿದ್ದರೆಂದು ಕಾಲಮಾನವನ್ನು ನಿರ್ಧರಿಸಿದ್ದಾರೆ.[17] ಜಿಲ್ಲೆಯ ಚಂದ್ರವಳ್ಳಿ ಕೆರೆ ಕರ್ನಾಟಕದಲ್ಲೇ ಪ್ರಾಚೀನ ಕೆರೆಯಾಗಿದ್ದು ಈ ಕೆರೆಯನ್ನು ಸುಂದರ.ಅ.ರವರು ಶಾತವಾಹನರ ಕಾಲದ್ದಾಗಿರಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[18] ಡಾ.ಎಸ್.ಜಿ.ರಾಮದಾಸರೆಡ್ಡಿ ಅವರು ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲದ ಜನರಿಂದ ಕೆರೆ ನಿರ್ಮಾಣ ಆಗಿರಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ.[19]ಇದೇ ವಿದ್ವಾಂಸರು ಇನ್ನಿತರ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಗುರುತಿಸಿ ಅಲ್ಲಿರುವ ಕಟ್ಟೆಗಳನ್ನು ಅವರಿಂದ ನಿರ್ಮಾಣ ಆಗಿರುವ ಸಾಧ್ಯತೆಯಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ.[20] ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹರತಿ ಕೋಟೆಯ ಕೆರೆಗಳು ಬೃಹತ್ ಶಿಲಾಯುಗದ ಮಾನವನ ಕಾಲದಲ್ಲೇ ಚಿಕ್ಕಮಟ್ಟದಲ್ಲಿ ನಿರ್ಮಾಣಗೊಂಡು ನಂತರದ ಕಾಲಮಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಕೆರೆಗಳಾಗಿ ನಿರ್ಮಾಣಗೊಂಡಿರುವ ಸಾಧ್ಯತೆಯಿದೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಗ್ರಾಮದ ನೆಲೆಯನ್ನು ಅತಿ ಜರೂರಾಗಿ ಉತ್ಖನನ ಮಾಡಿ ಈ ಕೆರೆಗಳ ಮೇಲೆ ಸ್ಪಷ್ಟವಾದ ಮಾಹಿತಿಯನ್ನು ಹೊರ ಚೆಲ್ಲ ಬೇಕಾಗಿದೆ.

ವಿಜಯನಗರ ಕಾಲದ ಹಾಗೂ ವಿಜಯನಗರೋತ್ತರ ಕಾಲಮಾನದಲ್ಲಿ ಹರತಿ ಪಾಳೇಯಗಾರರು ಹರತಿ ಕೋಟೆ ಇತರ ಪ್ರದೇಶಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಕೆರೆಗಳ ನಿರ್ಮಾಣ, ಕಟ್ಟೆಗಳ ನಿರ್ಮಾಣ, ಕಾಲುವೆಗಳ ನಿರ್ಮಾಣದ ಕೆಲಸಗಳಿಗೆ ಸಾಕಷ್ಟು ಗಮನ ಕೊಟ್ಟಿರುವುದು ಕಂಡು ಬರುತ್ತದೆ.[21]

ತಿಪ್ಪೆಯನಾಯಕ ಅಥವಾ ತಿಪ್ಪಣ್ಣನಾಯಕ ವಿಜಯನಗರದ ಸಾಳುವ ನರಸಿಂಹನ ಕಾಲದಲ್ಲಿ ಶ್ರೀಮನ್ಮಹಾಮಂಡಲೇಶ್ವರ ಎಂಬ ಬಿರುದು ಪಡೆದು ಮೃತಪತ್ನಿ ಲಕ್ಷ್ಮಿದೇವಿಯ ಹೆಸರಿನಲ್ಲಿ ನಿಡಗಲ್ಲು ಬೆಟ್ಟದ ಮೇಲೆ ಒಂದು ಕೆರೆಯನ್ನು ಕಟ್ಟಿಸಿದನು.[22.23] ಹರತಿ ಚಿಕ್ಕಪ್ಪ ನಾಯಕ ಬೇವಿನಹಳ್ಳಿ ತಿರುಮೆಗಳನಾಥಪುರ ಮಾರ್ಗವಾಗಿ ಮೈಲೇನಹಳ್ಳಿ ಗ್ರಾಮಕ್ಕೆ ಹಗರೆ(ವೇದಾವತಿ) ತೊರೆಯ

ಕಾಲುವೆಯನ್ನು ತರಲಿಕ್ಕಾಗಿ, ಆ ದೇವರ ಸ್ಥಾನಿಕರಿಗೆ(ಎಲ್ಲಪ್ಪನಾಯಕನಿಗೆ) ಗದ್ದೆಯನ್ನು ಮಾನ್ಯವಾಗಿ ನೀಡಿದ್ದ ಬಗ್ಗೆ ಶಾಸನ ತಿಳಿಸುತ್ತದೆ.[24.25]

ಸಿದ್ದರಾಯನ ಕೋಟೆಯ(ಶಿಡ್ಲಯ್ಯನ ಕೋಟೆ) ಪಶ್ಚಿಮಕ್ಕಿರುವ ಕ್ರಿ.ಶ1574ರ ಶಾಸನದಲ್ಲಿ ಹಳ್ಳಿಯ ಪಶ್ಚಿಮಕ್ಕಿರುವ ಕೆರೆಯು ಬಹುಕಾಲದಿಂದಲೂ ಒಡೆದು ಹೋಗಿದ್ದುದನ್ನು ದಾಖಲಿಸುತ್ತದೆ. ಹಳ್ಳಿಯ ಗೌಡ, ಶಾನುಭೋಗ ಮತ್ತಿತರರು ಮಹಾನಾಯಾಕಾಚಾರ್ಯನಿಗೆ (ಹರತಿಯ ಸ್ಥಳೀಯ ಮುಖ್ಯಪೆದ್ದ ನಾಯಕ) ಮನವಿ ಸಲ್ಲಿಸಿದರು. ಕೆರೆಯ ಕೆಳಗಿನ ಭೂಮಿ ಕೊಟ್ಟರೆ ತಾವೇ ಕೆರೆ ದುರಸ್ತಿ ಮಾಡುವುದಾಗಿ ಆ ಜನರು ಹೇಳಿದ ಉಲ್ಲೇಖವಿದೆ.[26]

ಮಹಾನಾಯಕಾಚಾರ್ಯ ಚಿಕ್ಕಪ್ಪನಾಯಕನು ಹಗರಿನದಿಗೆ ಕಾಲುವೆ ತೋಡಿಸಿದ್ದಕ್ಕಾಗಿ ಮತ್ತು ಹರತಿ ಐಮಂಗಲದ ಕರ್ಮಯ್ಯನ ಶಿಷ್ಯನ ಮಗ ತಿಮ್ಮಣ್ಣ ಪರಶುರಾಮಪುರದ ಚನ್ನಕೇಶವ ದೇವಸ್ಥಾನದ ಕೊಳವನ್ನು ಕಟ್ಟಿಸಿದ್ದಕ್ಕಾಗಿ ಹರತಿ ಸಿದ್ದಣ್ಣನಾಯಕನು ಹೊಸವೂರನ್ನು, ಕೆರೆ ಕೊಡುಗೆಯಾಗಿ ನೀಡಿದನು.[27]

ಚಳ್ಳಕೆರೆ 42ರ ಗೌರಸಮುದ್ರದ ಶಾಸನವು ಪುಲುಸುಮಾಮಿಡಿಯ (ಗೌರಿಪುರ, ಚಂದಬೋವ ಕಾಮೆನಾಯಕನ ಮಗ ಚೆಂನಪ್ಪನು ತನ್ನ ಒಡೆಯನ ಮುಂದೆ ನಾಗರ್ಜುನ ಕೋಟೆಯ ಸಮರಂಗದಲ್ಲಿ ಕಾದಿ ಮಡಿದುದ್ದಾಗಿ ಕಾಮೆನಾಯಕನು ತನ್ನ ಮಗ ಚೆಂಗಪ್ಪನ ಹೆಸರಿನಲ್ಲಿ ವೀರಸ್ತಂಭವನ್ನು ಪ್ರತಿಷ್ಠೆಮಾಡಿ ಅದನ್ನು ನಿರ್ಮಿಸಿದ ಬೋಗೋಜಂಗೆ ಪುಲುಸುಮಾಮಿಡಿಯ (ಇಂದಿನ ಗೌರಿಪುರ)ಕೆರೆಯನ್ನು ಕೊಟ್ಟು ವೀರ ಶಾಸನ ಬರೆಸಿದ ಬಗ್ಗೆ ಉಲ್ಲೇಖವಿದೆ.[28]

ಹರತಿಕೋಟೆಯಲ್ಲಿ ಇಂದಿಗೂ ಸುಸ್ಥಿತಿಯಲ್ಲಿರುವ ಕಲ್ಲುಬಾವಿಯಿದ್ದು ಉತ್ತರಾಭಿಮುಖವಾಗಿರುವ 7 ಅಡಿ ಎತ್ತರದ ಬಾಗಿಲನ್ನು ದಾಟಿ ಮೆಟ್ಟಿಲು ಇಳಿದು ಎಡಕ್ಕೆ ತಿರುಗಿ ಪೂರ್ವಪಶ್ಚಿಮಭಿಮುಖವಾಗಿ 65 ಕಲ್ಲು ಮೆಟ್ಟಿಲುಗಳನ್ನು ಇಳಿದರೆ ತಳಭಾಗದಲ್ಲಿ ಚೌಕಾಕಾರದಲ್ಲಿ 4 ಕಡೆ ಓಡಾಡಲು ಜಾಗವಿದೆ. ಮೆಟ್ಟಿಲುಗಳು ಮೇಲ್ಭಾಗದಲ್ಲಿ 12 ಅಡಿ ಅಗಲವಿದ್ದರೆ. ತಳಭಾಗದಲ್ಲಿ 4 ಅಡಿ ಅಗಲವಿದೆ. ಎರಡು ಬದಿಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಬಾವಿ ಸುತ್ತ ಕಲ್ಲುಗೋಡೆ ನಿರ್ಮಿಸಿದ್ದಾರೆ. ಬಾವಿಗೆ ಇಳಿಯುವ ಎರಡು ಕಡೆ ಗೋಡೆಗಳ ಮೇಲೆ ಮಿಥುನ ಶಿಲ್ಪ, ವಿನಾಯಕ, ಆನೆ ಹಾಗೂ ನಗ್ನ ಸ್ತ್ರೀ ಶಿಲ್ಪಗಳು ಕೆತ್ತಲ್ಪಟ್ಟಿವೆ. ಚಿಕ್ಕಗೂಡಿನಲ್ಲಿ ಬಸವಣ್ಣ ವಿಗ್ರಹವಿದೆ. ಬಾವಿಯನ್ನು ಬಿಳಿ ಗ್ರಾನೈಟ್ ಕಲ್ಲಿನಿಂದ ಕಟ್ಟಿದ್ದಾರೆ. ಈ ಬಾವಿಯನ್ನು ಪಾಳೇಗಾರರ ಕಾಲದಲ್ಲಿ ನಿರ್ಮಾಣಗೊಂಡಿದೆಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[29] ಆದರೆ ಯಾವುದೇ ಶಾಸನಗಳ ದಾಖಲೆಗಳಿಲ್ಲ. ಗ್ರಾಮದಲ್ಲಿ 1918ರಲ್ಲಿ ಪ್ಲೇಗು ರೋಗ ಕಾಣಿಸಿಕೊಂಡು ಗ್ರಾಮಸ್ಥರು ಊರೇ ತೊರೆದು ನಂತರ ಬಂದು ಈ ಬಾವಿಯ ನೀರನ್ನು ಬಳಸಿದಾಗ **'ನಾರುಹುಣ್ಣಿನ ಅಂಟು ಜಾಡ್ಯ'** ಕಾಣಿಸಿಕೊಂಡು ಜನರ ದೇಹ, ಕಾಲು, ಮರ್ಮಸ್ಥಳಗಳಲ್ಲಿ ನಾರುಹುಣ್ಣು ಆಯಿತು. ಇದೇ ಸಂದರ್ಭದಲ್ಲಿ ಮಿರ್ಜಾ ಇಸ್ಮಾಯಿಲ್ ದಾರಿಯಲ್ಲಿ ಹಾದು

ಹೋಗುವುದನ್ನು ಗ್ರಾಮದ ಮುಖಂಡ ರುದ್ರಪ್ಪ, ಖಾಸಿಂಸಾಹೇಬ ತಿಳಿದು, ಅವರಿಗೆ ಸ್ವಾಗತಿಸಿ ಗ್ರಾಮಕ್ಕೆ ಕರೆದೊಯ್ದು ಬಾವಿ ಮತ್ತು ಅಂಟು ಜಾಡ್ಯ ತೋರಿಸಿದರು. ತಕ್ಷಣ ಆರೋಗ್ಯ ಇಲಾಖೆಗೆ ಆದೇಶಿಸಿದಾಗ ಅತಿಸೂಕ್ಷ್ಮಕಾರದ ಕೆಂಪು ವರ್ಣದ ಮೀನುಗಳನ್ನು ಬಾವಿಗೆ ಬಿಟ್ಟರು ಅಂದಿನಿಂದ ನಾರುಹುಣ್ಣು ಮಾಯವಾಯಿತು ಎಂದು ಗ್ರಾಮಸ್ಥರು ಇಂದಿಗೂ ನೆನೆಯುತ್ತಾರೆ.[30]

ಹರತಿ ಪಾಳೇಯಗಾರರ ಕಾಲದ ಹಿರಿಯೂರಿನ ಸೋಮೇನರಹಟ್ಟಿ 52ನೇ ಶಾಸನದಲ್ಲಿ ಹಿರಿಯೂರಿನ ದಕ್ಷಿಣಭಾಗದ "ಮೆದ್ದಲು ಹಳ್ಳ" (ಹಿರಿಯೂರು ಮತ್ತು ಉಡುವಳ್ಳಿ ಮಧ್ಯಯಿದೆ)ವೆಂಬ ಹಳ್ಳಕ್ಕೆ ಒಡ್ಡು ಹಾಕಿ ಕೆರೆ ಕಟ್ಟಿದ ಬಗ್ಗೆ ಉಲ್ಲೇಖವಿದೆ.[31] ಹರತಿಯ ವೀರಹೊಟ್ಟಣ್ಣನಾಯಕನು ರಂಗಸಮುದ್ರದ ಬಸವೇಶ್ವರ ದೇವರಿಗೆ ರಂಗಸಮುದ್ರದ ಕೆರೆಯ ಕೆಳಗಣ ಭೂಮಿಯನ್ನು ದಾನ ನೀಡಿದ ಬಗ್ಗೆ,[32] ತಿರುಮಲ ನಾಯಕನು ಕಾಮಸಮುದ್ರದ ವೀರಭದ್ರದೇವರ ಅಮೃತ ಪಡಿಗಾಗಿ ಸೋಮ ಸೂರ್ಯೋಪರಾಗ (ಗ್ರಹಣ)ದ ಪುಣ್ಯ ಕಾಲದಲ್ಲಿ ಕೆರೆಯ ಮೊದಲ ಗದ್ದೆಯನ್ನು ನೀಡಿದ ಬಗ್ಗೆ ಉಲ್ಲೇಖವಿದೆ.[33] ಹರತಿಯ ವೀರಣ್ಣ ನಾಯಕನು ಯಲ್ಲಪ್ಪ ನಾಯಕನಿಗೆ ದೊಡ್ಡೇರಿ ಸೀಮೆಯಲ್ಲಿ ಕೆರೆಯನ್ನು ಮಾನ್ಯ ನೀಡಿದ ಬಗ್ಗೆ ಉಲ್ಲೇಖವಿದೆ.[34]

ಪಾಲನಾಯಕನ ಎರೆಂಬಾಪೆನಾಯಕನು ತನ್ನ ಹೆಸರಿನಲ್ಲಿ ಎರೆಬಾಪೆನಹಳ್ಳಿ (ಯರಬಳ್ಳಿ) ಯನ್ನು ನಿರ್ಮಿಸಿದನು[35] ಇವನೇ ಇಲ್ಲಿಯ ಕೆರೆಯನ್ನು ನಿರ್ಮಿಸಿರ ಬಹುದು. ಜೊತೆಗೆ ಇವರ ಕಾಲದಲ್ಲಿ ಕೋಟೆಕೆರೆ (ಇಂದುಹಾಳಾಗಿದೆ) ಐಮಂಗಲ (ಚಿಕ್ಕಕೆರೆ, ದೊಡ್ಡಕೆರೆಗಳು ಹಾಳಾಗಿವೆ) ಗೋಸಿಕೆರೆ, ಯರಬಳ್ಳಿ ಕೆರೆ, ಗೌರಿಪುರದ ಕೆರೆ, ದೊಡ್ಡೇರಿ ಕೆರೆ (ಮಧ್ವಸಮುದ್ರ ಅಥವಾ ವೆಂಕಟೇಶ್ವರ ಸಮುದ್ರ) ಇತರೆ ಕೆರೆಗಳನ್ನು ಇವರ ಕಾಲದಲ್ಲಿ ನಿರ್ಮಾಣ ಮಾಡಿ ನೀರಾವರಿ ಅಭಿವೃದ್ಧಿಗಾಗಿ ಹಾಗೂ ಕುಡಿಯುವ ನೀರಿಗಾಗಿ ಉತ್ತಮ ಮಟ್ಟದ ಪ್ರಜಾಸೇವನೆ ಇವರ ಕಾಲದಲ್ಲಿ ನಡೆದಿತ್ತೆಂದು ಹೇಳಬಹುದು.

ಹರತಿ ಪಾಳೇಯಗಾರರು ವ್ಯವಸ್ಥಿತವಾದ ನೀರಾವರಿ ವ್ಯವಸ್ಥೆಗೆ ವಿಶೇಷ ಆಧ್ಯತೆ ನೀಡಿದ್ದರೆಂದು ಸಿಕ್ಕಿರುವ ಕೆಲವೇ ಅಂಶಗಳಿಂದ ತಿಳಿದು ಬಂದರೂ ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯತೆಯಿದೆ. ವಿಶೇಷವಾದ ಅಂಶವೆಂದರೆ ಶಿಲಾಯುಗದ ಮಾನವನ ನೆಲೆಗಳ ಹತ್ತಿರವೇ ಬಹುಪಾಲು ಹರತಿ ಪಾಳೇಗಾರರ ಕಾಲದ ಕೆರೆಗಳು ಹೆಚ್ಚಾಗಿ ನಿರ್ಮಾಣಗೊಂಡಿದ್ದು ಈ ಪ್ರದೇಶಗಳು ಶಿಲಾಯುಗದ ಕಾಲದಲ್ಲೇ ಪ್ರಮುಖ ನೆಲೆಗಳಾಗಿದ್ದವೆಂದು ಕರ್ನಾಟಕದ ಇತರ ನದಿಗಳ, ಸಾಮ್ರಾಜ್ಯಗಳ ಭೂಭಾಗಗಳ ಹಾಗೆ ಹರತಿ ಪಾಳೇಗಾರರ ಈ ಭೂಪ್ರದೇಶವು ಪ್ರಮುಖ ಪ್ರದೇಶವಾಗಿತ್ತೆಂದು ಹೇಳಬಹುದು.

**ಪರಾಮರ್ಶನಾ ಗ್ರಂಥಗಳು**

1. ಡಾ. ನಾಗರಾಜು ಟಿ.ವಿ.– ಮೈಸೂರು ಸಂಸ್ಥಾನದಲ್ಲಿ ನೀರಾವರಿ – ಪುಟ.2–2008
2. ಕರ್ನಾಟಕ ಪರಂಪರೆ – ಭಾಗ – 1, ಸಂಪುಟ–1, 1970, ಪುಟ–4–9

3. ಗ್ರ್ಯಾಂಟ್‌ಡಫ್ ಅಂಡ್ ಬ್ರಿಗ್ಸ್ ಫೆರಿಸ್ಟ್ – ಬೊಂಬಾಯಿ ಪ್ರೆಸಿಡೆನ್ಸಿ ಗೆಜೆಟಿಯರ್ಸ್ – ಬೆಳಗಾಂ ಜಿಲ್ಲೆ – ಪುಟ –280–286–1884.

4. ದೀಕ್ಷಿತ್.ಜಿ.ಎಸ್.(ಅನು) ನಿಲತ್ತಹಳ್ಳಿ ಕಸ್ತೂರಿ – ಕರ್ನಾಟಕದಲ್ಲಿ ಕೆರೆ ನೀರಾವರಿ – ಪುಟ.20–2001.

5. ಸುಂದರ.ಅ – ಕರ್ನಾಟಕ ಚರಿತ್ರೆ – 1997–ಪುಟ–55–56.

6. – ಅದೇ – ಪುಟ – 59 – 1997.

7. ಪದ್ದಯ್ಯ.ಕೆ – ಅಶ್ಯೂಲಿಯನ್ ಅಕ್ಯುಪೇಶನ್ ಸ್ಟೇಟ್ ಅಂಡ್ ಅಸೋಸಿಯೇಟೆಡ್ ಫಾಸಿಪಾನ್ ಫ್ರಮ್‌ದಿ ಹುಣಸಗಿ ಬೈಚಬಾಳ ಪೆನಿನ್‌ಸುಲಾರ್–ಇಂಡಿಯಾ ಅಂದ್ರೋಪ್ಲೇಸ್–1985.

8. ರಾಮದಾಸರೆಡ್ಡಿ.ಎಸ್.ಜಿ.ವೇದಾವತಿ ನದಿಯ ತೀರದ ಒಂದು ಸಾಂಸ್ಕೃತಿಕ ಅಧ್ಯಯನ. ಮೈ.ವಿ.ವಿ.(ಅಪ್ರಕಟಿತ ಪ್ರೌಢ ಪ್ರಬಂಧ) 2006–ಪುಟ–21.

9. ಪದ್ದಯ್ಯ.ಕೆ. 1995 ಏನ್ಸಿಯಂಟ್ ಆಂಧ್ರ ಹಿಸ್ಟರಿ ಅಂಡ್ ಆರ್ಕಿಯಾಲಜಿ ನ್ಯೂಲೈಟ್ ಆನ್ ದಿ ಅರ್ಲಿ ಆಗ್ರೋಪಾಸ್ಟೋಲ್ ಕಮ್ಯುನಿಟೀಸ್ ಆಫ್ ಸೌತ್ ಇಂಡಿಯ. ಹಿಸ್ಟರಿ ಕಾಂಗ್ರೆಸ್, ಅನಂತಪುರ–ಪುಟ–6.

10. ಸಂಕಾಲಿಯ. ಹೆಚ್.ಡಿ–ಪ್ರಿ ಅಂಡ್ ಪ್ರೋಟೋ ಹಿಸ್ಟರಿ ಆಫ್ ಇಂಡಿಯ ಅಂಡ್ ಪಾಕಿಸ್ತಾನ–1974.

11. ರಾಮದಾಸರೆಡ್ಡಿ.ಎಸ್.ಜಿ. – ಪೂರ್ವೋಕ್ತ –2006 ಪುಟ–22.

12. ರಾಮದಾಸರೆಡ್ಡಿ.ಎಸ್.ಜಿ. – ಇತಿಹಾಸದರ್ಶನ – ಸಂ–23, 2008, ಪುಟ–3–6.

13. ರಾಮದಾಸರೆಡ್ಡಿ.ಎಸ್.ಜಿ.–ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, 2009, ಪುಟ.85–97.

14. ರಾಮದಾಸರೆಡ್ಡಿ.ಎಸ್.ಜಿ.–ಪೂರ್ವೋಕ್ತ – 2008–ಪುಟ–3–6.

15. ಲಕ್ಷ್ಮಣ್‌ತೆಲಗಾವಿ–ಹರತಿಸಿರಿ – ಪುಟ – 517–1987.

16. ಲಕ್ಷ್ಮಣ್ ತೆಲಗಾವಿ – ಪೂರ್ವೋಕ್ತ – ಪುಟ–516. 1987.

17. ಡಾ. ರಾಮದಾಸರೆಡ್ಡಿ. ಎಸ್.ಜಿ.– ಪೂರ್ವೋಕ್ತ – 2009– ಪುಟ–127.

18. ಡಾ.ಗೋಪಾಲ್.ಆರ್–ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – 2009–ಪುಟ–127.

19. ಡಾ. ರಾಮದಾಸರೆಡ್ಡಿ.ಎಸ್.ಜಿ.ಪೂರ್ವೋಕ್ತ–ಪುಟ–129–2009.

20. – ಅದೇ – ಪುಟ – 129 – 130.

21. ಡಾ.ಗೋಪಾಲ್. ಆರ್– ಪೂರ್ವೋಕ್ತ – ಪುಟ–255.

22. ಕನ್ನಡ ವಿಷಯ ವಿಶ್ವಕೋಶ – ಪುಟ – 1568.

23. ಡಾ. ವಸು (ಸಂ) ದಕ್ಷಿಣ ಕರ್ನಾಟಕ ಅರಸುಮನೆತನಗಳು ಪುಟ–161.

24. ಇ.ಸಿ.–11–ಚಳ್ಳಕೆರೆ–13.

25. ಡಾ. ರಾಜಾರಾಂ ಹೆಗಡೆ – (ಸಂ) ಕೆರೆನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ ಪುಟ – 120.

26. ಇ.ಸಿ. – 11 ಹಿರಿಯೂರು – 25.

27. ಡಾ. ಗೋಪಾಲ್.ಆರ್–ಪೂರ್ವೋಕ್ತ – ಪುಟ– 135.

28. – ಅದೇ – ಪುಟ–136.

29. ಲಕ್ಷ್ಮಣ್ ತೆಲಗಾವಿ – ಪೂರ್ವೋಕ್ತ – ಪುಟ – 504–506–1987.

30. ಅದೇ – ಪುಟ – 1237, 1987.

31. ಟಿ.ಗಿರಿಜ – ಚಿತ್ರದುರ್ಗ ಜಿಲ್ಲಾದರ್ಶಿನಿ – ಪುಟ– 383.

32. ಇ.ಸಿ.–11 – ಹಿರಿಯೂರು – 52–52.

33. ಇ.ಸಿ.–11–ಶಾಸನ–26,47.

34. ಇ.ಸಿ.–11–ಶಾಸನ–38.

35. ಡಾ. ಗೋಪಾಲ.ಆರ್–ಪೂರ್ವೋಕ್ತ–ಪುಟ–135.